ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

17

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE: 30/1/21

# 'ಎಲ್ಲರ ವಿಶ್ವಾಸದೊಂದಿಗೆ ಪೀಠದ ಗೌರವ ಹೆಚ್ಚಿಸಲಿ'



ಉಪ ಸಭಾಪತಿಯಾಗಿ ಆಯ್ಕೆಯಾದ ಎಂ.ಕೆ.ಪ್ರಾಣೇಶ್ ಅವರನ್ನು ಸದಸ್ಯರು ಅಭಿನಂದಿಸಿದರು.



ಸದನದಲ್ಲಿ ಪ್ರಾಣೇಶ್ ಅವರ ಕುಟುಂಬ ಸದಸ್ಯರು.

**ಬೆಂಗಳೂರು:** ವಿಧಾನ ಪರಿಷತ್ತಿನ ಉಪ ಸಭಾಪತಿಯಾಗಿ ಬಿಜೆಪಿಯ ಎಂ.ಕೆ.ಪ್ರಾಣೇಶ್ ಆಯ್ಕೆಯಾಗಿದ್ದು ಎಲ್ಲರ ವಿಶ್ವಾಸದೊಂದಿಗೆ ಪೀಠದ ಗೌರವ ಹೆಚ್ಚಿಸುವ ಕೆಲಸ ಮಾಡುವಂತೆ ಸದಸ್ಯರು ಅಭಿನಂದಿಸಿದ್ದಾರೆ.

ಪ್ರಾಣೇಶ್ ಸ್ಪರ್ಧೆಯನ್ನು ಬಿಜೆಪಿಯ ಶಶೀಲ್ ನಮೋಶಿ ಹಾಗೂ ಮಹಾಂತೇಶ ಕವಟಗಿಮಠ ಪ್ರತ್ಯೇಕವಾಗಿ ಸೂಚಿಸಿದ್ದರು. ರಘುನಾಥರಾವ್ ಮಲ್ಕಾಪುರೆ ಹಾಗೂ ತೇಜಸ್ವಿನಿ ಅನುಮೋದಿಸಿದರು. ಕೆ.ಸಿ. ಕೊಂಡಯ್ಯ ಅವರ ಸ್ಪರ್ಧೆಯನ್ನು ಪ್ರತಿಪಕ್ಷದ ನಾಯಕ ಎಸ್.ಆರ್. ಪಾಟೀಲ್ ಹಾಗೂ ಅಲ್ಲಂ ವೀರಭದ್ರಪ್ಪ ಸೂಚಿಸಿದರು.

ಎಂ.ಕೆ. ಪ್ರಾಣೇಶ್ ಪರ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಎದ್ದು ನಿಂತು ಬೆಂಬಲ ಸೂಚಿಸಿದರು. ಬಿಜೆಪಿಯ 31 ಹಾಗೂ ಜೆಡಿಎಸ್‌ನ 10 ಸದಸ್ಯರು ಪ್ರಾಣೇಶ್ ಪರವಾಗಿ ನಿಂತರು. ಅವರ ವಿರುದ್ಧ ಕಾಂಗ್ರೆಸ್‌ನ 24 ಸದಸ್ಯರು ಎದ್ದು ನಿಂತರು. 41 ಮತ ಪಡೆದ ಪ್ರಾಣೇಶ್ ಅವರನ್ನು ಅಧಿಕೃತ ಚುನಾಯಿತರೆಂದು ಸಭಾಪತಿ ಕೆ.ಪ್ರತಾಪಚಂದ್ರ ಶೆಟ್ಟಿ ಘೋಷಣೆ ಮಾಡಿದರು.

**ಪ್ರಾಣೇಶ್ ಕಿರು ಪರಿಚಯ:** ಎಂ.ಕೆ. ಪ್ರಾಣೇಶ್ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಮಾಕೋನಹಳ್ಳಿಯಲ್ಲಿ 1961ರ ನವೆಂಬರ್ 28 ರಂದು ಜನಿಸಿದರು. ಬಿ.ಎ. ಪದವೀಧರರಾಗಿದ್ದು ಕೃಷಿಕರಾಗಿದ್ದಾರೆ. ಕಾಲೇಜು ದಿನಗಳಲ್ಲಿ ವಿವಿಧ ಸಂಘಟನೆಗಳ ಮೂಲಕ ಕಾರ್ಯನಿರ್ವಹಿಸಿ 1989 ರಲ್ಲಿ ಬಿಜೆಪಿ ಸೇರಿ ರಾಜಕೀಯ ಆರಂಭಿಸಿದರು. 1992- ರಲ್ಲಿ ಕಾಶ್ಮೀರ ಉಳಿಸಿ ಹೋರಾಟವಲ್ಲಿ ಲಾಲ್‌ಚೌಕ್‌ನಲ್ಲಿ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಬಿಜೆಪಿ ಮೂಡಿಗೆರೆ ತಾಲುಕು ಯುವ ಘಟಕದ ಅಧ್ಯಕ್ಷ, ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಜಿಪಂ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. 2016 ರಿಂದ ವಿಧಾನ ಪರಿಷತ್ತಿನ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## ಪ್ರಾಣೇಶ್ ಪರ ಎದ್ದು ನಿಂತ ಕೊಂಡಯ್ಯ

ಸಭಾಪತಿ ಕೆ.ಪ್ರತಾಪಚಂದ್ರ ಶೆಟ್ಟಿ ಬಿಜೆಪಿ ಅಭ್ಯರ್ಥಿ ಎಂ.ಕೆ.ಪ್ರಾಣೇಶ್ ಪರವಾಗಿರುವವರು ಎದ್ದು ನಿಲ್ಲುವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕೆ.ಸಿ. ಕೊಂಡಯ್ಯ ಕೂಡ ಗೊಂದಲಕ್ಕೆ ಒಳಗಾಗಿ ಎದ್ದು ನಿಂತರು. ತಕ್ಷಣ ಕಾಂಗ್ರೆಸ್ ಸದಸ್ಯರು ಅವರನ್ನು ಕುಳಿತುಕೊಳ್ಳುವಂತೆ ಸೂಚಿಸಿದಾಗ ಕುಳಿತುಕೊಂಡರು, ಕೆ.ಸಿ.ಕೊಂಡಯ್ಯ ಎದ್ದು ನಿಂತಿದ್ದಕ್ಕೆ ಬಿಜೆಪಿ ಸದಸ್ಯರು ಮೇಜು ಕುಟ್ಟಿ ಅಭಿನಂದಿಸಿದರು.

ಯಾರ್ಯಾರು ಏನೇನು ಹೇಳಿದ್ರು

ಈ ಸದನದಲ್ಲಿ ಎಂ.ಸಿ. ನಾಣಯ್ಯ, ಎಂ.ಆರ್. ತಂಗಾ, ಮಾಜಿ ಪ್ರಧಾನಿ ದೇವೇಗೌಡ, ಡಿ.ಎಚ್. ಶಂಕರ ಮೂರ್ತಿಯವರು ಸದಸ್ಯರಾಗಿ ಹೋಗಿದ್ದಾರೆ. ಎಲ್ಲರನ್ನೂ ಪ್ರಾಣೇಶ್ ಸಮಾನವಾಗಿ ನೋಡಿಕೊಂಡು ಪೀಠದ ಗೌರವ ಹೆಚ್ಚಿಸಲಿ.

- **ಕೋಟ ಶ್ರೀನಿವಾಸ ಪೂಜಾರಿ**, ಪರಿಷತ್ ಸಭಾನಾಯಕ

ಪ್ರಾಣೇಶ್ ಅಂದರೆ ಎಲ್ಲರ ಪ್ರಾಣಕ್ಕೆ ಈಶ್ವರ. ಸಭಾಪತಿ ಉಪ ಸಭಾಪತಿ ನಡುವೆ ಹೊಂದಾಣಿಕೆ ಅಗತ್ಯವಿದೆ. ಮುಂದಿನ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು ಎಲ್ಲರೂ ಹೊಂದಾಣಿಕೆ ಮಾಡಿಕೊಂಡು ಕೆಲಸ ಮಾಡಬೇಕು.

- **ಬಸವರಾಜ ಬೊಮ್ಮಾಯಿ**, ಸಚಿವ

ವ್ಯಕ್ತಿಗೆ ಕುರ್ಚಿಯಿಂದ ಗೌರವ ಬರಬಾರದು ವ್ಯಕ್ತಿಯಿಂದ ಕುರ್ಚಿಗೆ ಗೌರವ ಬರಬೇಕು. ನಾಲ್ವಡಿ ಕೃಷ್ಣರಾಜ ಒಡೆಯರ್ ಈ ಸದನವನ್ನು ಸ್ಥಾಪನೆ ಮಾಡಿದ್ದಾರೆ. ಅದರ ಘನತೆ ಗೌರವ ಉಳಿಯುವಂತೆ ಮಾಡಬೇಕು.

- **ಎಸ್.ಆರ್. ಪಾಟೀಲ್**, ಮೇಲ್ಮನೆ ಪ್ರತಿಪಕ್ಷದ ನಾಯಕ

ಪ್ರಾಣೇಶ್ ಉತ್ತಮ ಸಂಸದೀಯ ಪಟು. ಯಾವುದೇ ವಿಷಯದ ಮೇಲೆ ಸ್ಪಷ್ಟವಾಗಿ ತಿಳಿದುಕೊಂಡು ವಿಷಯ ಪ್ರಸ್ತಾಪ ಮಾಡುತ್ತಾರೆ. ಅವರು ಉತ್ತಮವಾಗಿ ಸಭೆ ನಡೆಸುವ ವಿಶ್ವಾಸ ಇದೆ.

- **ಬಸವರಾಜ ಹೊರಟ್ಟಿ**

ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತ. ಪಕ್ಷ ನಿಷ್ಠೆ ನನ್ನನ್ನು ಬೆಳೆಸಿತು. ಇನ್ನು ಮುಂದೆ ನಾನು ಪಕ್ಷಾತೀತವಾಗಿ ಸದನವನ್ನು ನಡೆಸಿಕೊಂಡು ಹೋಗುತ್ತೇನೆ. ಸದಸ್ಯರ ವಿಶ್ವಾಸಕ್ಕೆ ಚ್ಯುತಿ ಬರದಂತೆ ಸದನವನ್ನು ನಡೆಸಿಕೊಂಡು ಹೋಗುತ್ತೇನೆ.

- **ಎಂ.ಕೆ. ಪ್ರಾಣೇಶ್**, ಪರಿಷತ್ತಿನ ನೂತನ ಉಪ ಸಭಾಪತಿ

# ಹುಣಸೋಡು ಪ್ರಕರಣ: ಕಾಂಗ್ರೆಸ್ ನಿಲುವಳಿ ಮಂಡನೆ

**ವಿಧಾನಸಭೆ:** ಹುಣಸೋಡು ಜಿಲೆಟಿನ್ ಕಡ್ಡಿ ಸ್ಫೋಟ ಪ್ರಕರಣ ಕುರಿತು ಪ್ರತಿಪಕ್ಷ ಕಾಂಗ್ರೆಸ್ ನಿಲುವಳಿ ಸೂಚನೆ ಮಂಡಿಸಿ ಚರ್ಚೆಗೆ ಅವಕಾಶ ಕೋರಿದೆ. ಪ್ರಶ್ನೋತ್ತರ ಕಲಾಪದ ನಂತರ ಸಿದ್ದರಾಮಯ್ಯ ಅವರು ನಿಲುವಳಿ ವಿಚಾರ ಪ್ರಸ್ತಾಪಿಸಿ ಶಿವಮೊಗ್ಗ ಸಮೀಪ ಸಂಭವಿಸಿರುವ ದುರಂತ ಅತ್ಯಂತ ಗಂಭೀರವಾದ ವಿಚಾರ. ಆರು ಮಂದಿ ಮೃತಪಟ್ಟಿದ್ದಾರೆ. ಹೀಗಾಗಿ, ಆ ಕುರಿತು ಚರ್ಚೆಗೆ ಅವಕಾಶ ಕೊಡಬೇಕು ಎಂದು ಆಗ್ರಹಿಸಿದರು. ಆಗ, ನಿಲುವಳಿ ಸೂಚನೆಯನ್ನು ನಿಯಮ 69ಕ್ಕೆ ಪರಿವರ್ತನೆ ಮಾಡಿ ಸೋಮವಾರ ಚರ್ಚೆಗೆ ಅವಕಾಶ ಕೊಡುವುದಾಗಿ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ರೂಲಿಂಗ್ ನೀಡಿದರು.

## ಪದ್ಮ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ

ಡಾ.ಚಂದ್ರಶೇಖರ ಕಂಬಾರ, ಜೋಗತಿ ಮಂಜಮ್ಮ, ಡಾ.ಬಿ.ಎಂ.ಹೆಗಡೆ, ಆರ್.ಎಲ್. ಕಶ್ಯಪ್, ಕೆ.ವೈ.ವೆಂಕಟೇಶ್, ಎಸ್.ಪಿ.ಬಾಲಸುಬ್ರಹ್ಮಣ್ಯಂ ಸೇರಿ ಪದ್ಮ ಪ್ರಶಸ್ತಿ ಗೌರವಕ್ಕೆ ಪಾತ್ರರಾದವರಿಗೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಸದನದ ಮೂಲಕ ಅಭಿನಂದನೆ ಸಲ್ಲಿಸಿದರು. ಸದಸ್ಯರು ಮೇಜು ಕುಟ್ಟಿ ಹರ್ಷ ವ್ಯಕ್ತಪಡಿಸಿದರು.